**ಅಸಲು ದಾವ ಸಂಖ್ಯೆಃ 580/2020**
**ಪಿ.ಡಬ್ಲೂ -1**

ದಿಃ 15.03.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
**ಮುಂದುವರೆದ ಪಾಟೀ ಸವಾಲು 1 ಮತ್ತು 2 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್ ವಿ ಕೆ ರವರಿಂದಃ-**

1. 1 ಮತ್ತು 2 ನೇ ಪ್ರತಿವಾದಿಯವರು ಕಟ್ಟಡ ನಿರ್ಮಾಣ ಮಾಡವ ಬಗ್ಗೆ City Corporation Belagavi ಯಲ್ಲಿ ನಾನು ಲಿಖಿತ ಅರ್ಜಿ ಸಲ್ಲಿಸಿ ಮಾಹಿತಿ ಪಡೆದಿರುತ್ತೇನೆ. ಈದಾವೆ ಹೂಡವ ಎಷ್ಟು ದಿನಗಳ ಹಿಂದೆ ಆ ರೀತಿ ಅರ್ಜಿ ಸಲ್ಲಿಸಿದ್ದೆನು ಎಂದು ನನಗೆ ನೆನಪಿಲ್ಲ. ನಾನು ನೀಡಿದ ಅರ್ಜಿ ಪಡೆದ ಬಗ್ಗೆ 4 ನೇ ಪ್ರತಿವಾದಿಯು ಸ್ವೀಕೃತಿ ನೀಡಿರುತ್ತಾರೆ. ಸದರಿ ಅರ್ಜಿ ಹಾಗೂ ಸ್ವೀಕೃತಿಯನ್ನು ನಾನು ಈ ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ನಾನು ಅರ್ಜಿ ನೀಡಿದ ಮೇರೆಗೆ 4 ನೇ ಪ್ರತಿವಾದಿಯು 1 ಮತ್ತು 2 ನೇ ಪ್ರತಿವಾದಿಗೆ ಕಟ್ಟಡ ನಿರ್ಮಾಣ ಮಾಡದಂತೆ ತಿಳಿಸಿರುತ್ತಾರೆ. ನಾನು ನೀಡಿದ ಲಿಖಿತ ಅರ್ಜಿಯ ಮೇರೆಗೆ ದಾಖಲಾದ ಪ್ರಕರಣವು ಇಲ್ಲಿಯವರೆಗೆ ಮುಗಿದಿಲ್ಲ. ಸದರಿ ಪ್ರಕರಣದ ನಡಾವಳಿಗಳ ಬಗ್ಗೆ ನಾನು ಈ ನ್ಯಾಯಾಲಯದಲ್ಲಿ ದಾಖಲೆಗಳನ್ನು ಹಾಜರುಪಡಿಸಿಲ್ಲ. 1 ಮತ್ತು 2 ನೇ ಪ್ರತಿವಾದಿಯರಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ 4 ನೇ ಪ್ರತಿವಾದಿಯು ನಾನು ನೀಡಿದ ಅರ್ಜಿಯ ಕುರಿತು ಯಾವುದೇ ಪ್ರಕರಣ ದಾಖಲು ಮಾಡಿಲ್ಲ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಗೆ ಅರ್ಜಿ ಸಲ್ಲಿಸಿ ಉದ್ದೇಶಪೂರ್ವಕವಾಗಿ ಅವರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಸೇರಿದ ಮನೆ ಗೋಡೆಯನ್ನು 1 ಮತ್ತು 2 ನೇ ಪ್ರತಿವಾದಿಯರು ಕೆಡವಿದ್ದು, ಈ ಬಗ್ಗೆ 4 ನೇ ಪ್ರತಿವಾದಿಗೆ ದೂರು ಸಲ್ಲಿಸಿದ್ದು ನನ್ನ ಪರ ಸಾಕ್ಷಿ ನುಡಿಯಲಿ ಎಂದು 4 ನೇ ಪ್ರತಿವಾದಿಯನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಲಾಗಿರುತ್ತದೆ. ಈ ಬಗ್ಗೆ ನನ್ನ ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ. ವಾದಪತ್ರದಲ್ಲಿ 4 ನೇ ಪ್ರತಿವಾದಿ ಬಗ್ಗೆ ಏನು ಬರೆಯಲಾಗಿದೆ ಎಂದು ಖಾತರಿಪಡಿಸಿಕೊಂಡು ವಾದಪತ್ರಕ್ಕೆ ಸಹಿ ಮಾಡಿರುತ್ತೇನೆ. ನನ್ನ ಪರ ಸಾಕ್ಷಿ ನುಡಿಯಲಿ ಎಂಬ

ಉದ್ದೇಶದಿಂದ 4 ನೇ ಪ್ರತಿವಾದಿಯನ್ನು ಪಕ್ಷಕಾರರನ್ನಾಗಿ ಮಾಡಿದ್ದು ಸದರಿಯವರ ವಿರುದ್ಧ ಯಾವುದೇ ಪರಿಹಾರ ಕೋರಿಲ್ಲ.

2. 1 ಮತ್ತು 2 ನೇ ಪ್ರತಿವಾದಿಯು ನನ್ನ ಸ್ವತ್ತಿನಲ್ಲಿ 3 ಅಡಿ ಜಾಗ ಅತಿಕ್ರಮಣ ಮಾಡಿರುವ ಬಗ್ಗೆ ನಾನು ಫೋಟೋವನ್ನು ಹಾಜರು ಮಾಡಿರುತ್ತೇನೆ. 3 ಅಡಿ ಒತ್ತುವರಿ ಆಗಿರುವ ಬಗ್ಗೆ ಕಾರ್ಪೋರೇಶನ ಗೆ ಅರ್ಜಿ ಸಲ್ಲಿಸಿ ಅಳತೆ ಮಾಡಿಸಿ ವರದಿಯನ್ನು ಹಾಜರುಪಡಿಸಿರುತ್ತೇನೆ. 2020-21 ನೇ ಸಾಲಿನಲ್ಲಿ ನನ್ನ ಸ್ವತ್ತನ್ನು ಅಳತೆ ಮಾಡಿಕೊಡುವಂತೆ ಸಿಟಿ ಸರ್ವೆ ಇಲಾಖೆಗೆ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸದರಿ ಅರ್ಜಿ ಸಲ್ಲಿಸುವಾಗ ಆಜುಬಾಜು ಸ್ವತ್ತಿನ ಮಾಲೀಕರ ವಿವರವನ್ನು ನಾನು ಅರ್ಜಿಯಲ್ಲಿ ನಮೂದು ಮಾಡಿರುತ್ತೇನೆ. 2020 ರಲ್ಲಿ ಸಿಟಿಎಸ್ ನಂಬರ 4012/ಎ ರ ಸ್ವತ್ತು ಹವಳರವರ ಸ್ವಾಧೀನದಲ್ಲಿತ್ತು. ಹವಳ ರವರ ಆಸ್ತಿಗೆ ಹತ್ತಿಕೊಂಡಂತೆ ನನ್ನ ಹಾಗೂ ಸಿಟಿಎಸ್ ನಂಬರ 4012/ಬಿ ಇತ್ತು ಎಂದರೆ ಸರಿ. ಆ ಸಮಯದಲ್ಲಿ ನನ್ನ ಹಾಗೂ ಅಕ್ಕಪಕ್ಕದವರ ನಡುವೆ ಯಾವುದೇ ತಕರಾರು ಇರಲಿಲ್ಲ ಎಂದರೆ ಸರಿ. ಸಿಟಿಎಸ್ ನಂಬರ 4012/ಎ ಹಾಗೂ 4012/ಬಿ ರ ಬಗ್ಗೆ ಸಿಟಿ ಸರ್ವೆ ಇಲಾಖೆಗೆ ನೀಡಿದ ಅರ್ಜಿಯಲ್ಲಿ ನಮೂದು ಮಾಡಿರುತ್ತೇನೆ. ಸಿಟಿಎಸ್ ನಂಬರ 4012/ಸಿ ರ ಬಗ್ಗೆ ಸಿಟಿ ಸರ್ವೆ ಇಲಾಖೆಗೆ ನೀಡಿದ ಅರ್ಜಿಯಲ್ಲಿ ನಮೂದು ಮಾಡಿರುತ್ತೇನೆ. ಸಿಟಿ ಸರ್ವೆ ಇಲಾಖೆಗೆ ಅರ್ಜಿ ಸಲ್ಲಿಸುವಾಗ ನಾನು ಉತಾರವನ್ನು ಹಾಜರುಪಡಿಸಿದ್ದು, ವಿಭಾಗ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ಸಿಟಿ ಸರ್ವೆ ಇಲಾಖೆಗೆ ಅರ್ಜಿ ನೀಡಿದ ಸಮಯದಲ್ಲಿ ಹಿಂದಿನ ಸಿಟಿ ಸರ್ವೆ ನಕ್ಷೆಗಳನ್ನು ಹಾಜರುಪಡಿಸಿರುವುದಿಲ್ಲ. ಸಿಟಿ ಸರ್ವೆ ಇಲಾಖೆಗೆ ಅರ್ಜಿ ನೀಡಿದ ಬಗ್ಗೆ ಹಾಗೂ ಅಳತೆ ಮಾಡಿ ಕೊಡಲು ಫೀ ತುಂಬಿದ ಬಗ್ಗೆ ನಾನು ಈ ದಾವೆಯನ್ನು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ಅರ್ಜಿಯ ಮೇರೆಗೆ ಸಿಟಿ ಸರ್ವೆ ಇಲಾಖೆಯವರು ಆಜಬಾಜುದಾರರಿಗೆ ನೋಟಿಸ ನೀಡಿದ ಬಗ್ಗೆ ಹಾಗೂ ಅಳತೆ ಮಾಡಿದ ಬಗ್ಗೆ ನಾನು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸಿಟಿ ಸರ್ವೆ ಇಲಾಖೆಗೆ ಅರ್ಜಿ ಸಲ್ಲಿಸಿದ ಬಗ್ಗೆ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ಸಿಟಿ ಸರ್ವೆ ಇಲಾಖೆಯವರು ತಯಾರಿಸಿದ ನಕ್ಷೆ ಹಾಗೂ ಪಿಟಿ ಶೀಟ ಹಾಗೂ ವರದಿ ಬಗ್ಗೆ ನಾನು ಕಾರ್ಪೋರೇಶನಗೆ ಹೋಗಿ ಮಾಹಿತಿ ಪಡೆದಿರುತ್ತೇನೆ. ನಾನು

ಸಲ್ಲಿಸಿದ್ದ ಅರ್ಜಿ ಇನ್ನು ಬಾಕಿ ಇದೆ. ನಾನು ಸಿಟಿ ಸರ್ವೆ ಇಲಾಖೆಗೆ ಸಿಟಿಎಸ್ ನಂಬರ 4012/ಎ, 4012/ಬಿ ಹಾಗೂ 4012/ಸಿ ಅಳತೆ ಬಗ್ಗೆ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸಿಟಿಎಸ್ ನಂಬರ 4013 ರ ಸ್ವತ್ತು ನಮ್ಮ ಸ್ವತ್ತಿನ ಯಾವುದೇ ದಿಕ್ಕಿಗೆ ಬರುವುದಿಲ್ಲ ಎಂದರೆ ಸರಿ. ಸಿಟಿಎಸ್ ನಂಬರ 4013 ಹಾಗೂ 4012/ಸಿ ರ ಸ್ವತ್ತುಗಳ ಅಳತೆ ಮಾಡುವಾಗ ನನಗೆ ನೋಟಿಸ ನೀಡಲಾಗಿತ್ತು. ಆ ರೀತಿ ನನಗೆ ನೋಟಿಸ ನೀಡಿದ ಬಗ್ಗೆ ನಾನು ಈ ನ್ಯಾಯಾಲಯದಲ್ಲಿ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸಿಟಿಎಸ್ ನಂಬರ 4013 ಹಾಗೂ 4012/ಸಿ ರ ಸ್ವತ್ತುಗಳ ಅಳತೆಯನ್ನು ಯಾವಾಗ ಮಾಡಲಾಯಿತು ಹಾಗೂ ನಕ್ಷೆಯನ್ನು ಯಾವಾಗ ತಯಾರಿಸಲಾಯಿತು ಎಂದು ನನಗೆ ಗೊತ್ತಿಲ್ಲ. ಈ ಬಗ್ಗೆ ವಕೀಲರಿಗೆ ನಾನು ಮಾಹಿತಿಯನ್ನು ನೀಡಿರುತ್ತೇನೆ. ಸಿಟಿಎಸ್ ನಂಬರ 4013 ರ ಮಾಲೀಕರು ಸಿಟಿಎಸ್ ಇಲಾಖೆಗೆ ಪ್ರತ್ಯೇಕವಾಗಿ ಅರ್ಜಿಯನ್ನು ಸಲ್ಲಿಸಿದ್ದರು. ಸಿಟಿಎಸ್ ನಂಬರ 4013 ರ ಸ್ವತ್ತಿಗೆ ಹೊಂದಿಕೊಂಡಂತೆ ನನ್ನ ಸ್ವತ್ತು ಇಲ್ಲ ಎಂದರೆ ಸರಿ. ಸಿಟಿಎಸ್ ನಂಬರ 4013 ರ ಪೂರ್ವ ದಿಕ್ಕಿಗೆ 1 ನೇ ಪ್ರತಿವಾದಿಯ ಸ್ವತ್ತು, ಪಶ್ಚಿಮಕ್ಕೆ ಗಟರ ಹಾಗೂ ಸರ್ವಿಸ ರಸ್ತೆ ಇರುತ್ತದೆ, ಉತ್ತರಕ್ಕೆ ಯಲ್ಲಪ್ಪಾ ಕರಿಗಾರ ರವರ ಆಸ್ತಿ ಮತ್ತ ದಕ್ಷಿಣಕ್ಕೆ ಗಣಾಚಾರಿ ಗಲ್ಲಿ ಇರುತ್ತದೆ. ಸಿಟಿಎಸ್ ನಂಬರ 4013 ರ ಪೂರ್ವ ದಿಕ್ಕಿಗೆ ಸಿಟಿಎಸ್ ನಂಬರ 4012/ಸಿ ರ ಸ್ವತ್ತಿನಲ್ಲಿ ರವೀಂದ್ರ ಮತ್ತಿಕಲ್ಲಿ ರವರ ಕೆಂಪು ಹಂಚಿನ ಮನೆ ಇತ್ತು ಎಂದರೆ ಸರಿ. ರವೀಂದ್ರ ಹಾಗೂ 3 ನೇ ಪ್ರತಿವಾದಿಯ ಸ್ವತ್ತಿನ ನಡುವೆ ಇದ್ದ ಸಮಾಯಿಕ ಗೋಡೆಯ ಬಗ್ಗೆ ಯಾವುದೇ ತಕರಾರು ಇರಲಿಲ್ಲ ಎಂದರೆ ಸರಿ. ರವೀಂದ್ರ ರವರು ತಮ್ಮ ಸ್ವತ್ತನ್ನು 1 ನೇ ಪ್ರತಿವಾದಿಗೆ ಮಾರಾಟ ಮಾಡಿದ ನಂತರ 3 ನೇ ಪ್ರತಿವಾದಿ ಹಾಗೂ 1 ನೇ ಪ್ರತಿವಾದಿ ನಡುವೆ ತಕರಾರು ಶುರುವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಯರು ನಮ್ಮ ಕುಟುಂಬಕ್ಕೇ ಸೇರಿದವರಲ್ಲ ಎಂದರೆ ಸರಿ. ನಮ್ಮ ಕುಟುಂಬಕ್ಕೆ ಸೇರದ ವ್ಯಕ್ತಿಯಾದ 1 ನೇ ಪ್ರತಿವಾದಿಯು ಸ್ವತ್ತನ್ನು ಖರೀದಿ ಮಾಡಿದ್ದರಿಂದ ನಾನು ಹಾಗೂ 3 ನೇ ಪ್ರತಿವಾದಿ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ. ದಿಃ 20-05-2013 ರಂದು ಯಾರು ಯಾರು ಸ್ಥಳದಲ್ಲಿ ಹಾಜರಿದ್ದರು ಎಂದು ನನಗೆ ಗೊತ್ತಿಲ್ಲ. ದಿಃ 20-05-2013 ರಂದು ನಾನು ಸ್ಥಳದಲ್ಲಿ ಹಾಜರಿರಲಿಲ್ಲ. ದಿಃ 20-05-2013 ರಂದು ನಾನು ಸ್ಥಳದಲ್ಲಿ ಹಾಜರಿಲ್ಲದ

ಬಗ್ಗೆ ನನ್ನ ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ. 3 ನೇ ಪ್ರತಿವಾದಿಯು ಯಾವ ದಿನಾಂಕದಂದು ಅರ್ಜಿ ಸಲ್ಲಿಸಿರುತ್ತಾರೆ, ಯಾವ ದಿನಾಂಕದಂದು ಅಳತೆ ಆಗಿದೆ ಹಾಗೂ ನಕ್ಷೆ ತಯಾರಾಗಿದೆ ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. 3 ನೇ ಪ್ರತಿವಾದಿಯ ಮಾತು ಕೇಳಿಕೊಂಡು 1 ಹಾಗೂ 2 ನೇ ಪ್ರತಿವಾದಿಯರು ಅತಿಕ್ರಮಣ ಮಾಡಿರುತ್ತಾರೆ ಎಂದು ಖೊಟ್ಟಿ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರು ನನ್ನ ಸ್ವತ್ತಿನಲ್ಲಿ ಯಾವುದೇ ಅತಿಕ್ರಮಣ ಮಾಡಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರು ನನ್ನ ಸ್ವತ್ತಿನಲ್ಲಿ ಎಷ್ಟು ವಿಸ್ತೀರ್ಣದ ಅತಿಕ್ರಮಾಣ ಮಾಡಿದ್ದಾರೆ ಎಂದು ತೋರಿಸಲು ಸಿಟಿ ಸರ್ವೆ ಇಲಾಖೆಯಿಂದ ಯಾವುದೇ ಮ್ಯಾಪ ಪಡೆದು ಹಾಜರುಪಡಿಸಿಲ್ಲ ಎಂದರೆ ಸರಿ.

3. 1 ನೇ ಪ್ರತಿವಾದಿಯು ಖಾಸಗಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ದಾವೆ ಹೂಡಿದಾಗ 1 ಮತ್ತು 2 ನೇ ಪ್ರತಿವಾದಿಯರು ಗೊಂದಳಿ ಗಲ್ಲಿ ಬೆಳಗಾವಿಯಲ್ಲಿ ವಾಸವಿದ್ದರು. ಸದರಿಯವರು ಗೊಂದಳಿ ಗಲ್ಲಿಯಲ್ಲಿ ವಾಸ ಮಾಡುತ್ತಿರುವ ವಿಚಾರ ನನಗೆ 3 ನೇ ಪ್ರತಿವಾದಿಯಿಂದ ತಿಳಿದಿರುತ್ತದೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಏನು ಉದ್ಯೋಗ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ಎಲ್ಲಿ ಉದ್ಯೋಗ ಮಾಡುತ್ತಾರೆ ಎಂದು ಈ ದಾವೆ ಹೂಡುವ ಮುನ್ನ ನಾನು ವಿಚಾರಣೆ ಮಾಡಿರುವುದಿಲ್ಲ ಸಾಕ್ಷಿಯು ಮುಂದುವರೆದು 2 ನೇ ಪ್ರತಿವಾದಿ ಸರ್ಕಾರಿ ನೌಕರರಾಗಿರುತ್ತಾರೆ ಎಂದು ನುಡಿಯುತ್ತಾರೆ. 1 ಮತ್ತು 2 ನೇ ಪ್ರತಿವಾದಿಯರು ಸಿಟಿಎಸ್ ನಂಬರ 4012/ಸಿ ರ ಸ್ವತ್ತಿನಲ್ಲಿ ವಾಸಮಾಡುತ್ತಿದ್ದು, 2019 ರಲ್ಲಿ ಬಿದ್ದ ಮಳೆಯಲ್ಲಿ ಮನೆ ಕುಸಿದುಬಿದ್ದಿದ್ದು ನಂತರ ಅವರು ಗೊಂದಳಿ ಗಲ್ಲಿಯಲ್ಲಿ ವಾಸ ಮಾಡಲು ಶುರುಮಾಡಿರುತ್ತಾರೆ ಎಂದರೆ ಸರಿ. ಮಳೆಯಿಂದ ಮನೆ ಬಿದ್ದವರಿಗೆ ಕಾರ್ಪೋರೇಶನ ರವರು ಮನೆ ರಿಪೇರಿ ಮಾಡಿಕೊಳ್ಳಲು ಅನುದಾನ ನೀಡಿರುತ್ತಾರೆ ಎಂದರೆ ಸರಿ. ಕಾರ್ಪೋರೇಶನ ರವರು ಅನುಮತಿಯ ಅವಶ್ಯಕತೆ ಇಲ್ಲದೆ 1 ಮತ್ತು 2 ನೇ ಪ್ರತಿವಾದಿಯರಿಗೆ ಮನೆ ನಿರ್ಮಾಣ ಮಾಡಿಕೊಳ್ಳಲು ಸೂಚಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಯರಿಗೆ ಕಾರ್ಪೋರೇಶನ ರವರು ಅನುದಾನ ನೀಡಿದ ಬಗ್ಗೆ ನಾನಾಗಲೀ 3 ನೇ ಪ್ರತಿವಾದಿಯಾಗಲೀ ಲಿಖಿತವಾಗಿ ಯಾವುದೇ ತಕರಾರು ಸಲ್ಲಿಸಿಲ್ಲ. ಹೆಚ್ಚು

ಮಳೆಯಿಂದ ಮನೆಗಳು ಬಿದ್ದಿದ್ದರಿಂದ ಯಾರು ಯಾರು ಮನೆ ನಿರ್ಮಾಣ ಮಾಡಿರುತ್ತಾರೋ ಅವರ ವಿರುದ್ಧ ಕಾರ್ಪೋರೇಶನ ರವರು ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದರೆ ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**